<u>ದಿನಾಂಕ **30.01.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**</u>

<u>ಮುಂದುವರೆದ ಪಾಟಿ ಸವಾಲು ಃ ಪ್ರತಿವಾದಿ ಪರ ವಕೀಲರಿಂದ</u>

ಪಿತ್ರಾರ್ಜಿತ ಆಸ್ತಿ ಎಂದು ರುಜುವಾತು ಪಡಿಸಲು ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇನೆ. ನನ್ನ ತಾತನ ಹೆಸರಿನಲ್ಲಿ ಮನೆ ಗದ್ದೆ ಇತ್ತು. ನನ್ನ ತಂದೆ ತಾಯಿ ತಮ್ಮ ಸಂಪಾದನೆಯಿಂದ ಖರೀದಿ ಮಾಡಿರುವಂತ ಸ್ವತ್ತು ಹೋಟೆಲ್ ವ್ಯವಹಾರದಿಂದ ಖರೀದಿ ಮಾಡಿರುವ ಸ್ವತ್ತು ಎಂದರೆ ಸರಿಯಲ್ಲ ಒಟ್ಟು ಕುಟುಂಬದ ಸ್ವತ್ತು ಎಂದು ನುಡಿಯುತ್ತಾರೆ. ನನ್ನ ತಂದೆ ತಾಯಿಯವರು ಬಾಗೂರಿನಲ್ಲೇ ವಾಸವಾಗಿದ್ದರು. ನನ್ನ ಅಜ್ಜ ಅಜ್ಜಿಯ ಮುಖವನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಈಗ ನನ್ನ ತಾಯಿ ಚನ್ನರಾಯಪಟ್ಟಣ ನನ್ನ ತಮ್ಮನ ಮನೆಯಲ್ಲಿ ವಾಸಿಸುತ್ತಿದ್ದಾರೆ. ನನ್ನ ತಂದೆ ಮೃತ ಪಡುವ ಮುಂಚೆ ಬಾಗೂರಿನಲ್ಲೇ ವಾಸವಾಗಿದ್ದರು. ನನ್ನ ತಮ್ಮ ಚನ್ನರಾಯಪಟ್ಟಣದಲ್ಲಿ 5-6 ವರ್ಷಗಳ ಇಚೆಗೆ ಮನೆ ಕಟ್ಟಿರುತ್ತಾರೆ. ಮೊದಲು ಚನ್ನರಾಯಪಟ್ಟಣದಲ್ಲಿ ಬಾಡಿಗೆ ಮನೆಯಲ್ಲಿ ಇದ್ದರು. ನಾವು ಊರಿನಲ್ಲೇ ಇದ್ದೇವು. ನನ್ನ ತಂದೆಯವರು ಕಾಯಿಲೆಯಿಂದ ನರಳುತ್ತಿದ್ದರು ಎಂದರೆ ಸರಿ . ಪ್ರತಿವಾದಿ 3 ರವರ ಜೊತೆ ನನ್ನ ತಾಯಿ ತಂದೆ ವಾಸಿಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ಪ್ರತಿವಾದಿ 3 ರವರು ಇದ್ದ ಬಾಡಿಗೆ ಮನೆಯಲ್ಲಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ 3 ರವರ ಮನೆಗೆ ಬಂದು ಬಹಳ ವರ್ಷಗಳಾಗಿರುತ್ತದೆ ಎಂದರೆ ಸರಿಯಲ್ಲ ಇತ್ತೀಚೆಗೆ 3-4 ವರ್ಷದಿಂದ ಇರುತ್ತಾರೆ. ನಾವು ಅವರ ಹಾರೈಕೆ ಮಾಡುತ್ತಿಲ್ಲ ಎಂದರೆ ಸರಿಯಲ್ಲ ನಾನು ನೊಡಿರುತ್ತೇನೆ. ನಾನು ಗುತ್ತಿಗೆದಾರ ಕೆಲಸ ಮಾಡಿಕೊಂಡು ಹಾಸನದಲ್ಲೇ ವಾಸ ಮಾಡಿಕೊಂಡು ಯಾವತ್ತಿಗೂ ನನ್ನ ಪೋಷಕರನ್ನು ನೋಡಿಲ್ಲ ಎಂದರೆ ಸರಿಯಲ್ಲ. ಸ್ವತ್ತನ್ನು ಸ್ವಯಾರ್ಜಿತವಾದ ಕಾರಣ ಮಾರಾಟ ಮಾಡಿ ಅದರ ಹಣವನ್ನು ನಮ್ಮೆಲ್ಲರಿಗೂ ನೀಡಿದ್ದಾರೆ ಎಂದರೆ ಸರಿಯಲ್ಲ, ಅದು ಪತ್ರದಲ್ಲಿ ತಪ್ಪಾಗಿ ಪಿತ್ರಾರ್ಜಿತ ಸ್ವತ್ತು ಎಂದು ನಮೂದು ಮಾಡಿದ್ದು ಅದು ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ನಮ್ಮ ಚಿಕ್ಕಪ್ಪನವರು ಹಾಕಿದ ಕೇಸಿನಲ್ಲಿ ನಾವು ಅಸಲು ದಾವಾ ನಂ. 1/2010 ರಲ್ಲಿ ನಾವು ಪಿತ್ರಾರ್ಜಿತ ಸ್ವತ್ತು ಎಂದು ಪ್ರತಿಪಾದನೆ ಮಾಡಿರುವುದಿಲ್ಲ ಕಾರಣ ಅವರು ಕೇಸು ಹಾಕಿದ್ದು ಗೊತ್ತಿಲ್ಲ. ಆ ಕೇಸನ್ನು ನಾನೇ ಹಾಕಿಸಿರುತ್ತೇನೆ ಎಂದರೆ ಸರಿಯಲ್ಲ. ಆ ಕೇಸು ವಜಾ ಆಗಿರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿಗೆ 08.05.2019 ರಲ್ಲಿ ದಾನ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದು ಗೊತ್ತಾದ ನಂತರ ತಡೆಯಿಡಲು ಅರ್ಜಿಯನ್ನು ಕೊಟ್ಟಿರುವುದಿಲ್ಲ. ಕಾರಣ ನನಗೆ ಗೊತ್ತಿರುವುದಿಲ್ಲ. ವಿಚಾರ ಗೊತ್ತಿದ್ದು ನಾನು ಅಶಜಿಯನ್ನು ಹಾಕಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲದೆ ದಾನಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಈಗಲೂ ಸಹ ನನ್ನ ತಾಯಿ 3 ನೇ ಪ್ರತಿವಾದಿಯ ಜೊತೆ ಇರುತ್ತಾರೆ ಎಂದರೆ ಸರಿ. ನನ್ನ ತಾಯಿಯ ನಿರ್ವಹಣೆಯನ್ನು 3 ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ನನ್ನ ತಂದೆಯವರು ತಾಯಿಯ ಹೆಸರಿನಲ್ಲಿ 25 ಲಕ್ಷ ರೂ ಎಫ್ ಡಿ ಇಟ್ಟಿರುತ್ತಾರೆ. ಆದ್ದರಿಂದ 3 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದಾರೆ. ಅದು ಎಫ್ ಡಿ ಕೆನರಾ ಬ್ಯಾಂಕ್ ನಲ್ಲಿ ಇಟ್ಟಿರುತ್ತಾರೆ. ಅದನ್ನು ಹಾಜರು ಪಡಿಸುತ್ತೇನೆ. ನನ್ನ ತಂದೆಯವರ ತಿಥಿ ಕಾರ್ಯ ಒಟ್ಟಿಗೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿಯ ಸ್ವಯಾರ್ಜಿತ ಸ್ವತ್ತಾದ ಕಾರಣ 3 ನೇ ಪ್ರತಿವಾದಿಯ ಮಗನಿಗೆ ದಾನ ಪತ್ರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾನ ಪತ್ರ ಮಾಡಿದ್ದು 2022 ರಲ್ಲಿ ನ್ಯಾಯಾಲಯಕ್ಕೆ ಬಂದಾಗ ಗೊತ್ತಾಗಿರುತ್ತದೆ.

ದಾವೆಯನ್ನು ನಾನೇ ಹಾಕಿರುತ್ತೇನೆ. ನಾನು ತಕರಾರು ಅರ್ಜಿಯನ್ನು ಪಂಚಾಯಿತಿಯಲ್ಲಿ ಹಾಕಿದ್ದು ಅದು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಪಂಚಾಯಿತಿಗೆ ಹೋಗಿರುವುದಿಲ್ಲ. ಆ ಸ್ವತ್ತು ನನ್ನ ತಂದೆ ತಾಯಿಯವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಅದು ಯಾವುದು ಪಿತ್ರಾರ್ಜಿತ ಸ್ವತ್ತುಗಳಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಹಿಸ್ಸೆ ಕೇಳಲು ಹಕ್ಕು ಇಲ್ಲ ಎಂದರೆ ಸರಿಯಲ್ಲ. ಎಲ್ಲಾ ಸ್ವಯಾರ್ಜಿತ ಸ್ವತ್ತು ಎಂದು ಗೊತ್ತಿದ್ದು ಅವರಿಗೆ ತೊಂದರೆ ಕೊಡಬೇಕೆಂದು ಈ ಸುಳ್ಳು ದಾವೆ ಹಾಕಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಕಿದಂತಹ ದಾಖಲಾತಿಗಳಲ್ಲಿ ನನ್ನ ತಂದೆ ತಾಯಿಯವರ ಸ್ವಯಾರ್ಜಿತ ಸ್ವತ್ತು ಎಂದು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ ದಾಖಲಾತಿಗಳಲ್ಲಿ ಪಿತ್ರಾರ್ಜಿತ ಸ್ವತ್ತುಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಸ್ವಯಾರ್ಜಿತ ಸ್ವತ್ತಾದ ಕಾರಣ ನನಗಾಗಲಿ ನನ್ನ ಸಹೋದರಿಯಾರಿಗಾಗಲಿ ಹಿಸ್ಸಾ ಹಕ್ಕು ಸ್ವಾಧೀನತೆ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.